**ಯೋಜನಾ ನಿರ್ದೇಶಕರ ಕಾರ್ಯಾಲಯ**
ಜಿಲ್ಲಾ ನಗರಾಭಿವೃದ್ಧಿ ಕೋಶ

ಕರ್ನಾಟಕ ಸರ್ಕಾರ

ದೂರವಾಣಿ: 08392-273465
E-Mail: dudc_bellary@yahoo.co.in
**ಜಿಲ್ಲಾಧಿಕಾರಿಗಳ ಕಛೇರಿ ಆವರಣ,**
ಬಳ್ಳಾರಿ.

**ಸಂಖ್ಯೆ: ಜಿನಕೋಬ/ಹಂಪಿಉತ್ಸವ/01/2017-18** **ದಿನಾಂಕ:04.10.2017**

# ಪ್ರಕಟಣೆ

ಹಂಪಿ ಉತ್ಸವ 2017ರ **"ಛಾಯಾಚಿತ್ರ ಸ್ಪರ್ಧೆ"** ಕಾರ್ಯಕ್ರಮಕ್ಕೆ, ಆಸಕ್ತಿಯುಳ್ಳ ನುರಿತ ಛಾಯಾಚಿತ್ರಕಾರರಿಗೆ ಭಾಗವಹಿಸುವುದಕ್ಕೆ ಮುಕ್ತ ಅವಕಾಶವನ್ನು ಕಲ್ಪಿಸಿದ್ದು, ಭಾಗವಹಿಸುವವರು **ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಬಳ್ಳಾರಿ** ಇವರಲ್ಲಿ ಅರ್ಜಿಯೊಂದಿಗೆ ಅಥವಾ ದೂರವಾಣಿ ಮೂಲಕ ದಿನಾಂಕ:**28.10.2017** ರೊಳಗಾಗಿ ನೊಂದಾಯಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **08392-273465** ನ್ನು ಸಂಪರ್ಕಿಸಬಹುದು. ಭಾಗವಹಿಸುವರಿಗೆ ಈ ಕೆಳಕಂಡ ನಿಯಮ ಮತ್ತು ನಿಬಂಧನೆಗಳನ್ನು ವಿಧಿಸಲಾಗಿದೆ.

**"ಛಾಯಾಚಿತ್ರ ಸ್ಪರ್ಧೆ"**

- ಛಾಯಾ ಚಿತ್ರಗಳ ವಿಷಯ: 1) ವನ್ಯ ಜೀವಿ ಚಿತ್ರಣ 2) ಹಂಪಿಯ ಪ್ರಾಕೃತಿಕ ಚಿತ್ರಣ 3) ಹಂಪಿಯ ಪರಂಪರೆ ಹಾಗೂ ಸಂಸ್ಕೃತಿಯ ಚಿತ್ರಣ 4) ಹಂಪಿಯ ಜೀವ ಜಾಲಕ್ಕೆ ಸಂಬಂಧಿಸಿದ ಚಿತ್ರಣಗಳು.
- ಎಲ್ಲಾ ಛಾಯಾ ಚಿತ್ರಗಳು (ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿ) ದಿನಾಂಕ: **28.10.2017**ರೊಳಗೆ **ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ** ಇವರಿಗೆ ಸಲ್ಲಿಸತಕ್ಕದ್ದು.
- ಛಾಯಾ ಚಿತ್ರದ ಗಾತ್ರ 16" x 20" ಕಡ್ಡಾಯವಾಗಿ ಇರತಕ್ಕದ್ದು. ಛಾಯಾ ಚಿತ್ರವು ಚೌಕಟ್ಟನ್ನು ಹೊಂದಿದ್ದು, ಅದರ ಶೀರ್ಷಿಕೆ, ವಿಷಯ ಮತ್ತು ಛಾಯಾಚಿತ್ರ ತೆಗೆದ ಸ್ಥಳದ ಕುರಿತು ಮಾಹಿತಿಯನ್ನು ಛಾಯಾಚಿತ್ರದ ಕೆಳಗೆ ನೀಡತಕ್ಕದ್ದು. ಜೊತೆಗೆ ಛಾಯಾಚಿತ್ರಗಾರರ ಹೆಸರು ಮತ್ತು ವಿಳಾಸವನ್ನು ಮತ್ತು ಕ್ಯಾಮೆರಾದ ನಮೂನೆ ಹಾಗೂ ಮಾದರಿ ಸಂಖ್ಯೆಯನ್ನು ನೀಡತಕ್ಕದ್ದು.
- ಭಾಗವಹಿಸುವವರು ಒಂದು ವಿಷಯದ ಬಗ್ಗೆ ಒಂದೇ ಚಿತ್ರವನ್ನು ಕಳುಹಿಸಬೇಕು. ಒಂದು ವೇಳೆ ಎಲ್ಲಾ ವಿಷಯಗಳ ಚಿತ್ರಗಳನ್ನು ಶೀರ್ಷಿಕೆಯೊಂದಿಗೆ ತಲಾ ಒಂದರಂತೆ ಕಳುಹಿಸಬಹುದು.
- ಎಲ್ಲಾ ಛಾಯಾ ಚಿತ್ರಗಳು ಮೂಲ ಚಿತ್ರಗಳಾಗಿರಬೇಕು. ಛಾಯಾಚಿತ್ರದ ಗಾತ್ರವನ್ನು ಸರಿಪಡಿಸಲು ಅವನ್ನು ಕ್ರಾಪ್ ಮಾಡಬಾರದು. ಡಿಜಿಟಲ್ ಮಿಕ್ಸಿಂಗ್ / ಎಫೆಕ್ಟ್ ಬಳಸಕೂಡದು.
- ಛಾಯಾ ಚಿತ್ರಗಳು ಕಪ್ಪು ಬಿಳುಪು ಅಥವಾ ಬಣ್ಣದ್ದಾಗಿರಬಹುದು.
- ಭಾಗವಹಿಸುವ ಕಲಾಕೃತಿಗಳು ಈ ಮುಂಚೆ ಯಾವುದೇ ಸ್ವರ್ಧೆಗಳಲ್ಲಿ ಅಥವಾ ಪ್ರದರ್ಶನಗಳಲ್ಲಿ ಪ್ರದರ್ಶಿಸಿರಬಾರದು.
- ವಿಷಯವಾರು ಆಯ್ಕೆಯಾದ ಉತ್ತಮ ಕಲಾಕೃತಿಗಳಿಗೆ ಪ್ರಥಮ ಬಹುಮಾನ ರೂ 25,000, ದ್ವಿತೀಯ ಬಹುಮಾನ ರೂ 15,000 ಹಾಗೂ ತೃತೀಯ ಬಹುಮಾನ ರೂ 10,000ಗಳೊಂದಿಗೆ ಪ್ರಶಸ್ತಿ ಪತ್ರ ನೀಡಲಾಗುವುದು.
- ಕಲಾಕೃತಿಗಳು ಬಳ್ಳಾರಿ ಜಿಲ್ಲಾಧಿಕಾರಿಗಳ ಸುಪರ್ಧಿಗೊಳಪಡುತ್ತವೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ,
ಬಳ್ಳಾರಿ.